(ಇಂದು ದಿನಾಂಕಃ 18-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್.ಆರ್.ಬಿ. ವಕೀಲರಿಂದಃ</u>**

ನನ್ನ ಪ್ರತಿವಾದ ಪತ್ರಕ್ಕೆ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ಸದರಿ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವ ವಿಷಯಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನಮ್ಮ ತಂದೆಗೆ ನಾವು ಜನ ಗಂಡು ಮಕ್ಕಳು ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿ ಅರ್ಗಾ ಗ್ರಾಮದಲ್ಲಿ ಇತ್ತು ಎಂದರೆ ಸರಿ. ಸದರಿ ಅರ್ಗಾ ಗ್ರಾಮದ ಪಿತ್ರಾರ್ಜಿತ ಆಸ್ತಿಗಳು ಭೂಸ್ವಾಧೀನಗೊಂಡಿವೆ ಎಂದರೆ ಸರಿ. ಭೂಸ್ವಾಧೀನಗೊಂಡ ಆಸ್ತಿಗೆ ಸಂಬಂಧಪಟ್ಟಂತೆ ಸರಕಾರದವರು ಭೂಪರಿಹಾರ ಧನ ಕೊಟ್ಟಿದ್ದಾರೆ ಮತ್ತು ಪುನರ್ವಸತಿ ಯೋಜನೆಯಡಿಯಲ್ಲಿ ನಿವೇಶನಗಳನ್ನೂ ಸಹ ಕೊಟ್ಟಿದ್ದಾರೆ ಎಂದರೆ ಸರಿ. ಭೂಸ್ವಾಧೀನ ಅಧಿಕಾರಿಗಳು ಒತ್ತಾಯಪೂರ್ವಕವಾಗಿ ಭೂಸ್ವಾಧೀನಗೊಂಡ ಜಮೀನುಗಳಿಂದ ನಿರ್ವಸತಿಗೊಳಿಸಿದ ನಂತರ ನಾವು ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದರೆ ಸರಿ. ಆ ಸಮಯದಲ್ಲಿ ನಮಗೆ ವಾಸಿಸಲು ಮನೆ ಇಲ್ಲದ್ದರಿಂದ ದಾವಾ ಸ್ವತ್ತಿನಲ್ಲಿ ತಾತ್ಕಾಲಿಕವಾಗಿ ಅಲ್ಲಿ ವಾಸವಾಗಿದ್ದೆವು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಮನೆ ಕಟ್ಟಿಕೊಂಡು ವಾಸವಾಗಿದ್ದೆವು ಎಂದು ಹೇಳುತ್ತಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ನಮ್ಮ ತಂದೆ - ತಾಯಿ ಜೀವಿತವಾಗಿದ್ದರು ಇದ್ದರು ಎಂದರೆ ಸರಿ.

1 ನೇ ಪ್ರತಿವಾದಿಯ ಮಕ್ಕಳಲ್ಲಿ ವಾದಿಯ ಗಂಡ ಹಿರಿಯರು ಎಂದರೆ ಸರಿ. ನಾಲ್ಕೂ ಜನ ಸೇರಿ ನಾವು ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದೇವೆ ಎಂದರೆ ಸರಿ. ನಾಲ್ಕೂ ಜನ ಜಂಟಿಯಾಗಿ ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಜಂಟಿಯಾಗಿ ನಮ್ಮ ಹೆಸರುಗಳು ದಾಖಲಾಗಿದ್ದವು ಎಂದರೆ ಸರಿ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ